# ಲಂಬೂ ಹುಡುಗಿ!



ಜಗತ್ತಿನ ಹದಿಹರೆಯದ ಹುಡುಗಿಯರಲ್ಲೇ ಈಕೆ ಅತ್ಯಂತ ಎತ್ತರದಾಕೆ! ಆರು ಅಡಿ ಹತ್ತು ಅಂಗುಲ ಎತ್ತರದ ಇವಳ ತೂಕ 130 ಕೆ.ಜಿ! ಪೂರ್ವ ಥಾಯ್ಲೆಂಡಿನ ಈಕೆಯ ಹೆಸರು ಮಾಲಿ ದುಆಂಗ್ಡಿ. ಜನವರಿ 2009ರವರೆಗೆ ಅತಿ ಎತ್ತರದ ಹುಡುಗಿ ಎಂಬ ಖ್ಯಾತಿ ಬ್ರೆಝಿಲ್‌ನ ಎಲಿಸಾನಿ ಸಿಲ್ವಾಳದಾಗಿತ್ತು. ಅವಳ ಎತ್ತರ 6 ಅಡಿ 9 ಅಂಗುಲ. ಮಾಲಿ ಅವಳಿಗಿಂತ ಒಂದು ಅಂಗುಲ ಹೆಚ್ಚು ಬೆಳೆದು ಗಿನ್ನಿಸ್ ವಿಶ್ವ ದಾಖಲೆಯಲ್ಲಿ ಸೇರಿ ಬಿಟ್ಟಳು.

ಇದೇನೂ ಅವಳಿಗಾಗಲೀ, ಮನೆಯವರಿಗಾಗಲೀ ಖುಷಿ ಕೊಡುವ ವಿಚಾರ ಅಲ್ಲ. ಅವಳ ಬೆಳವಣಿಗೆಯನ್ನು ನಿಯಂತ್ರಿಸಲು ಅವರು ಹೆಣಗಾಡುತ್ತಿದ್ದಾರೆ. ಪ್ರತಿ ಮೂರು ತಿಂಗಳಿಗೊಮ್ಮೆ ವೈದ್ಯರ ಸಲಹೆಯಂತೆ ಭಾರಿ ಬೆಲೆಯ ಚುಚ್ಚುಮದ್ದು ಕೊಡಿಸುತ್ತಿದ್ದಾರೆ. ಆ ಚುಚ್ಚುಮದ್ದಿನ ಬೆಲೆಯೇ ಸುಮಾರು 1.45 ಲಕ್ಷ ರೂಪಾಯಿ ಇದೆಯಂತೆ! ಹೀಗೆ ಔಷಧಿ ಕೊಟ್ಟು ಬೆಳವಣಿಗೆಯನ್ನು ನಿಂಯತ್ರಿಸಿದ್ದು ಅಲ್ಲವಾದಲ್ಲಿ ಮಾಲಿ ಇನ್ನೂ ಅದೆಷ್ಟು ಬೆಳೆದಿರುತ್ತಿದ್ದಳೋ!

ಈ ರೀತಿ ಎತ್ತರಕ್ಕೆ ಬೆಳೆಯಲು ಕಾರಣ ಅವಳ ಮೆದುಳಿನಲ್ಲಿರುವ ಒಂದು ಗಡ್ಡೆ. ಅದು ಅವಳ ನರವೊಂದರ ಮೇಲೆ ಒತ್ತಡ ಹಾಕುತ್ತಿದೆಯಂತೆ. 'ಇದರಿಂದಾಗಿ ಹಾರ್ಮೋನ್ ಬಿಡುಗಡೆಯಲ್ಲಿ ಅಸಮತೋಲನ ಉಂಟಾಗಿದೆ' ಎಂಬುದು ವೈದ್ಯರ ಅಭಿಪ್ರಾಯ. ಇದನ್ನು ನಿಯಂತ್ರಿಸಲು ಮಾಲಿ ಕುಟುಂಬ ಬಹು ದೊಡ್ಡ ಆರ್ಥಿಕ ಹೊರೆಯನ್ನು ಹೊರಬೇಕಾಗಿದೆ.

ಮಾಲಿಗೆ ಯಾರೂ ಗೆಳತಿಯರಿಲ್ಲ. ಮೆದುಳಿನ ಗಡ್ಡೆಯಿಂದಾಗಿ ಅವಳು ತನ್ನ ದೃಷ್ಟಿಯನ್ನೂ ಕಳೆದುಕೊಂಡಿದ್ದಾಳೆ. ಈ ದೃಷ್ಟಿಹೀನ ಲಂಬೂ ಹುಡುಗಿಯನ್ನು ಯಾರು ವಿವಾಹವಾದಾರು? ಅವಳು ತನ್ನ ವಿವಾಹದ ಬಗ್ಗೆ ಯೋಚಿಸುವುದೇ ಇಲ್ಲವಂತೆ. ಈ ಎಲ್ಲ ತೊಂದರೆಗಳ ಮಧ್ಯೆಯೂ ಆಕೆ ನಿರಾಶಳಾಗಿ ಮೂಲೆ ಹಿಡಿದು ಕುಳಿತಿಲ್ಲ. ಆಕೆ, ಚಿಕ್ಕ-ಪುಟ್ಟ ಮನೆಗೆಲಸಗಳನ್ನು ಹುಡುಕಿಕೊಂಡು ಮಾಡುತ್ತಾಳೆ. ಅಡುಗೆ ಮನೆಯಲ್ಲಿ ತನ್ನ ತಾಯಿಗೆ, ಬೇಡವೆಂದರೂ ಸಹಾಯ ಮಾಡುತ್ತಾಳೆ.

■ ಸುಭಾಸ ಯಾದವಾಡ

